


بسم اللهِ الرّحمٰنِ الرّحيم

# ಪ್ರವಾದಿ ಚರಿತ್ರೆ – ಹುದೈಬಿಯಾ ಸಂಧಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22–11–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹುದೈಬಿಯಾ ಸಂಧಿಗೆ ಸಂಬಂಧಿಸಿ ಪ್ರಸ್ತಾಪಿಸಲಾಗುತ್ತಿತ್ತು. ಈ ಕುರಿತು ಬುದೈಲ್ ಬಿನ್ ವರ್‌ಖಾ ಖುಝಾಯೀ ಮತ್ತು ಇತರ ಖುರೈಶಿ ನಾಯಕರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದ ಬಗ್ಗೆ ಪ್ರಸ್ತಾಪವಿದೆ. ಇದನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ವಿವರಿಸಿರುವರು: ಹಝ್ರತ್ ಪೈಗಂಬರ್(ಸ) ಹುದೈಬಿಯಾ ಕಣಿವೆಗೆ ತಲುಪಿ ಡೇರೆ ಹಾಕಿದ ನಂತರ ಖುಝಾಅ ಗೋತ್ರದ ಒಬ್ಬ ಪ್ರಸಿದ್ಧ ನಾಯಕ ಬುದೈಲ್ ಬಿನ್ ವರ್‌ಖಾ ಎಂಬವರು ತನ್ನ ಕೆಲವು ಸಂಗಡಿಗರ ಜೊತೆಗೆ ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾಗಲು ಬಂದರು. ಅವರು ಬಂದು ಹೀಗೆ ಹೇಳಿದರು: ಮಕ್ಕಾದ ಸರದಾರರು ಯುದ್ಧಕ್ಕಾಗಿ ತಯಾರಾಗಿ ನಿಂತಿರುವರು. ಅವರು ಎಂದಿಗೂ ನಿಮ್ಮನ್ನು ಮಕ್ಕಾದಲ್ಲಿ ಪ್ರವೇಶಿಸಲು ಬಿಡಲಾರರು. ಹಝ್ರತ್ ಪೈಗಂಬರ್(ಸ) ಹೇಳಿದರು: ನಾವು ಯುದ್ಧ ಮಾಡುವ ಉದ್ದೇಶದಿಂದ ಬಂದಿಲ್ಲ. ನಾವು ಕೇವಲ ಉಮ್ರ ಮಾಡುವ ಉದ್ದೇಶದಿಂದ ಬಂದಿದ್ದೇವೆ. ಮಕ್ಕಾದ ಖುರೈಶಿಯರನ್ನು ಯುದ್ಧದ ಬೆಂಕಿ ಸುಟ್ಟು ಬೂದಿಯನ್ನಾಗಿ ಮಾಡಿದೆಯಾದರೂ ಈ ಜನರು ಹಿಂದೆ ಸರಿಯುತ್ತಿಲ್ಲ ಎಂಬುದು ದುಃಖಕರ. ಅವರು ನನ್ನ ವಿರುದ್ಧ ಯುದ್ಧ ಮಾಡುವುದನ್ನು ನಿಲ್ಲಿಸಿ ನನ್ನನ್ನು ಇತರ ಜನರಿಗಾಗಿ ಬಿಟ್ಟು ಬಿಡುವ ಸಂಧಿಗೂ ನಾನು ತಯಾರಿದ್ದೇನೆ. ಆದರೆ ಅವರು ನನ್ನ ಈ ಸಲಹೆಯನ್ನು ಸಹ ನಿರಾಕರಿಸಿ ಯುದ್ಧದ ಬೆಂಕಿ ಉರಿಯುವಂತೆ ಮಾಡುವುದಾದರೆ, ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಆಣೆ, ನಾನು ಕೂಡ ಈ ಹೋರಾಟದಿಂದ ಹಿಂದೆ ಸರಿಯುವುದಿಲ್ಲ. ಒಂದೋ ನನ್ನ ಜೀವ ಈ ಮಾರ್ಗದಲ್ಲಿ ಬಲಿದಾನವಾಗುವುದು, ಇಲ್ಲದಿದ್ದರೆ ಅಲ್ಲಾಹನು ನನಗೆ ವಿಜಯವನ್ನು ನೀಡುವನು. ನಾನು ಅವರ ವಿರುದ್ಧದ ಹೋರಾಟದಲ್ಲಿ ಮೃತಪಟ್ಟರೆ, ಅಲ್ಲಿಗೆ ಕತೆ ಮುಗಿಯಿತು. ಆದರೆ ಅಲ್ಲಾಹನು ನನಗೆ ವಿಜಯವನ್ನು ದಯಪಾಲಿಸಿದರೆ ಮತ್ತು ನಾನು ತಂದ ದೀನಿಗೆ ವಿಜಯ ಲಭಿಸಿದರೆ, ಅನಂತರ ಮಕ್ಕಾದ ಜನರು ವಿಶ್ವಾಸ ಕೈಗೊಳ್ಳುವುದರಲ್ಲಿ ತಡಮಾಡಬಾರದು.

ಹಝ್ರತ್ ಪೈಗಂಬರ್(ಸ)ರ ಈ ಪ್ರಾಮಾಣಿಕ ಮತ್ತು ನೋವಿನ ಮಾತಿನ ಪ್ರಭಾವ ಬಹಳಷ್ಟು ಮಟ್ಟಿಗೆ ಬುದೈಲ್‌ನ ಮೇಲೆ ಉಂಟಾಯಿತು. ಅವರು ಮಕ್ಕಾಗೆ ಹೋಗಿ ಸಂಧಿ ಮಾಡಬೇಕು ಎಂಬ ಹಝ್ರತ್ ಪೈಗಂಬರ್(ಸ)ರ ಸಲಹೆಯ ಬಗ್ಗೆ ಖುರೈಶಿಯರಿಗೆ ತಿಳಿಸಿದರು. ಆಗ ಸಖೀಫ್ ಗೋತ್ರದ ಒಬ್ಬ ಪ್ರಭಾವಶಾಲಿ ನಾಯಕನಾದ ಉರ್‌ವ ಬಿನ್ ಮಸ್‌ಊದ್ ಹೀಗೆ ಹೇಳಿದನು: ನೀವು ಈ ಸಲಹೆಯನ್ನು ಅಂಗೀಕರಿಸಬೇಕು. ನಿಮ್ಮ ಪರವಾಗಿ ಮುಹಮ್ಮದ್(ಸ)ರ ಬಳಿಗೆ ಹೋಗಿ ಇನ್ನಷ್ಟು ಮಾತುಕತೆ ನಡೆಸಲು ನನಗೆ ಅನುಮತಿ ಕೊಡಿರಿ. ಆದರೆ ಆತನು ಮಕ್ಕಾ ನಿವಾಸಿಗಳ ಬಗ್ಗೆ ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರಲ್ಲಿ ಭಯ ಹುಟ್ಟಿಸಲು ಶ್ರಮಿಸಿದನು. ಆದರೆ ಅಲ್ಲಿ ಉರ್‌ವ ನೋಡಿದ್ದೇನೆಂದರೆ, ಹಝ್ರತ್ ಪೈಗಂಬರ್(ಸ) ಉಗುಳುವಾಗ ಅದನ್ನು ಕೂಡ ಸಹಾಬಿಯರು ಕೈಯಿಂದ ಸ್ವೀಕಾರ ಮಾಡಿಕೊಂಡು ಅದನ್ನು ತಮ್ಮ ಮುಖ ಮತ್ತು ಎದೆಗಳಿಗೆ ಒರೆಸುತ್ತಿದ್ದರು. ಏನಾದರೂ ಮಾಡಲು ಹಝ್ರತ್ ಪೈಗಂಬರ್(ಸ) ಸಹಾಬಿಯರಿಗೆ ಆದೇಶ ಕೊಟ್ಟರೆ ಸಹಾಬಿಯರು ಕೂಡಲೇ ಅದನ್ನು ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ವುಝೂ ಮಾಡುವಾಗ ಸಹಾಬಿಯರು ವುಝೂವಿನ ನೀರನ್ನು ಪಡೆಯಲಿಕ್ಕಾಗಿ ಮುನ್ನುಗ್ಗುತ್ತಿದ್ದರು. ಪೈಗಂಬರ್(ಸ)ರ ಯಾವುದೇ ಕೂದಲನ್ನು ನೆಲಕ್ಕೆ ಬೀಳಲು ಅವರು ಬಿಡುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ)ರ ಮುಂದೆ ಅವರು ತಮ್ಮ ಶಬ್ಧವನ್ನು ತಗ್ಗಿಸುತ್ತಿದ್ದರು. ಗೌರವದ ಕಾರಣದಿಂದ ಹಝ್ರತ್ ಪೈಗಂಬರ್(ಸ)ರನ್ನು ಅವರು ದಿಟ್ಟಿಸಿ ನೋಡುತ್ತಿರಲಿಲ್ಲ. ಇದೆಲ್ಲವನ್ನು ನೋಡಿದ ನಂತರ ಆತನು ಖುರೈಶಿಯರ ಬಳಿಗೆ ಬಂದು ಹೀಗೆ ಹೇಳಿದನು: ಎಲೈ ನನ್ನ ಜನರೇ, ನಾನು ರಾಯಭಾರಿಯಾಗಿ ಅರಸರ ಅರಮನೆಗಳಿಗೆ, ವಿಶೇಷತಃ ಇರಾನ್, ರೋಮ್, ಅಬಿಸೀನಿಯಾದ ಅರಸರ ಅರಮನೆಗಳಿಗೆ ಹೋಗಿದ್ದೇನೆ. ಅಲ್ಲಾಹನಾಣೆ, ಸಹಾಬಿಯರು ಮುಹಮ್ಮದ್(ಸ)ರನ್ನು ಅನುಸರಿಸುವ ರೀತಿಯಲ್ಲಿ ಯಾವುದೇ ಅರಸನನ್ನು ಜನರು ಅನುಸರಿಸುವುದಾಗಿ ನಾನು ಕಂಡಿಲ್ಲ.

(ಹುಝೂರ್ ಹೇಳಿದರು:) ಆತನು ಕಾಫಿರರ ಬಗ್ಗೆ ಹೇಳಿ ಹಝ್ರತ್ ಪೈಗಂಬರ್(ಸ)ರೊಳಗೆ ಭಯ ಹುಟ್ಟಿಸಲು ಬಂದಿದ್ದನು. ಆದರೆ ಈ ದೃಶ್ಯಗಳನ್ನು ನೋಡಿ ಆತನು ಪ್ರಭಾವಿತನಾಗಿ ಹೋದನು ಮತ್ತು ಈ ಸಂಗತಿಯನ್ನೇ ಆತನು ಹೋಗಿ ಕಾಫಿರರೊಡನೆ ಹೇಳಿದನು.

ಅನಂತರ ಅಹಾಬೀಶ್‌ನ ಸರದಾರ ಹಲೀಸ್ ಬಿನ್ ಅಲ್‌ಖಮ ಕನಾನಿ ಖುರೈಶಿಯರ ಪ್ರತಿನಿಧಿಯಾಗಿ ಬಂದನು. ಆತನು ದೂರದಿಂದ ಬರುವುದನ್ನು ಕಂಡಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಆಗಮಿಸುತ್ತಿರುವ ವ್ಯಕ್ತಿ ಕುರ್ಬಾನಿಯ ಜಾನುವಾರುಗಳನ್ನು ಗೌರವಿಸುವ ಗೋತ್ರದವನಾಗಿರುವನು. ಅನಂತರ ಸಹಾಬಿಯರೊಡನೆ ಹೀಗೆ ಹೇಳಿದರು: ಆತನಿಗೆ ತೋರಿಸಲು ಬಲಿದಾನದ ಜಾನುವಾರುಗಳನ್ನು ಆತನ ಮುಂದಿನಿಂದ ಸಾಗಿಸಿರಿ. ಅದನ್ನು ನೋಡಿದಾಗ ಆತನು ಹೇಳಿದನು: ಸುಬ್‌ಹಾನಲ್ಲಾಹ್, ಈ ಜನರನ್ನು ಬೈತುಲ್ಲಾಹ್‌ಗೆ ಬರುವುದರಿಂದ ತಡೆಯುವುದು ಸರಿಯಲ್ಲ. **ಲಖಿಮ್,**

**ಜುರ್ಹ್ಹಾಮ್, ಖುಂದ** ಮತ್ತು **ಹಮೀರ್** ಗೋತ್ರದವರನ್ನು ಹಜ್ಜ್ ಮಾಡಲು ಬಿಟ್ಟು ಅಬ್ದುಲ್ ಮುತ್ತಲಿಬ್‌ರ ಪುತ್ರರನ್ನು ಬೈತುಲ್ಲಾಹ್‌ಗೆ ಬರುವುದರಿಂದ ತಡೆಯಲು ಅಲ್ಲಾಹನು ಅನುಮತಿ ಕೊಟ್ಟಿಲ್ಲ. ಕಅಬದ ಪ್ರಭುವಿನ ಆಣೆ, ಖುರೈಶಿಯರು ನಾಶವಾಗುವರು. ನಿಸ್ಸಂಶಯವಾಗಿಯೂ ಇವರು ಉಮ್ರ ಮಾಡಲು ಬಂದಿರುವರು. ಈ ಮಾತುಗಳನ್ನು ಆಲಿಸಿ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನಾಣೆ, ಎಲೈ ಬನೂ ಕನಾನದ ಸಹೋದರ, ಖಂಡಿತವಾಗಿಯೂ ಮಾತು ಇದೇ ಆಗಿದೆ.

ಈ ಎಲ್ಲ ಸಂಗತಿಗಳನ್ನು ಖುರೈಶಿಯರಿಗೆ ತಿಳಿಸಿದಾಗ ಅವರು ಆತನನ್ನು ಅರಬಿಯೇತರನೆಂದು ಹೇಳಿ ಆತನು ನೋಡಿದ್ದನ್ನು ಹಝ್ರತ್ ಪೈಗಂಬರ್(ಸ)ರ ಮೋಸಗಾರಿಕೆ ಮತ್ತು ವಂಚನೆಯಾಗಿದೆ ಎಂದು ಹೇಳಿದರು. ನಊಧುಬಿಲ್ಲಾಹ್.

ಈ ಯಾತ್ರೆಯಲ್ಲಿ ತಲೆಯಲ್ಲಿ ವ್ಯಾಧಿಯಿದ್ದ ಕಾರಣದಿಂದ ತಲೆ ಮುಂಡಣ ಮಾಡದೇ ಇರಲು ಹಝ್ರತ್ ಕಅಬ್ ಬಿನ್ ಉಜ್ರಾಗೆ ಅನುಮತಿ ನೀಡಿದ ಬಗ್ಗೆ ಪ್ರಸ್ತಾಪ ಬರುತ್ತದೆ. ಅದೇ ರೀತಿಯಲ್ಲಿ ಖುರೈಶಿಯರ ಕಡೆಯಿಂದ ಅನೇಕ ಜನರು ರಾಯಭಾರಿಗಳಾಗಿ ಆಗಮಿಸಿದ ಬಗ್ಗೆಯೂ ಪ್ರಸ್ತಾಪ ಬರುತ್ತದೆ. ಅವರಲ್ಲಿ ಮಿಕ್‌ರಝ್ ಬಿನ್ ಹಫ್‌ಸ್ ಸಹ ಇದ್ದನು. ಆತನು ಬಂದಾಗ ಆತನನ್ನು ನೋಡಿ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಈತನು ಮೋಸಗಾರನಾಗಿದ್ದಾನೆ. ಧಿಕ್ಕಾರಿಯಾಗಿದ್ದಾನೆ ಎಂದು ಹೇಳಿದ್ದಾಗಿಯೂ ವರದಿಯಾಗಿದೆ. ಉರ್ವ ಮತ್ತು ಬುದೈಲ್‌ರೊಡನೆ ಹೇಳಿದ ಮಾತನ್ನೇ ಹಝ್ರತ್ ಪೈಗಂಬರ್(ಸ) ಆತನೊಡನೆಯೂ ಹೇಳಿದರು. ಅನಂತರ ಆತನು ತನ್ನ ಸಂಗಡಿಗರ ಬಳಿಗೆ ಮರಳಿ ಹೋಗಿ ಹಝ್ರತ್ ಪೈಗಂಬರ್(ಸ) ಆತನೊಡನೆ ಹೇಳಿದ ಸಂಗತಿಗಳನ್ನು ಅವರಿಗೆ ತಿಳಿಸಿದನು.

ರಾಯಭಾರಿಯಾಗಿ ಹಝ್ರತ್ ಖಿರಾಶ್ ಬಿನ್ ಉಮಯ್ಯರನ್ನು ಹಝ್ರತ್ ಪೈಗಂಬರ್(ಸ) ಖುರೈಶಿಯರ ಕಡೆಗೆ ಕಳುಹಿಸಿದ ಬಗ್ಗೆ ಮತ್ತು ಅವರೊಂದಿಗೆ ಖುರೈಶಿಯರ ಕೆಟ್ಟ ವರ್ತನೆ ಮತ್ತು ವಧಿಸಲು ಪ್ರಯತ್ನಿಸಿದ ಬಗ್ಗೆಯೂ ಪ್ರಸ್ತಾಪವಿದೆ. ಅಂತೂ ಖುರೈಶಿಯರು ಶಾಂತಿಭಂಗದ ಸ್ಥಿತಿಯನ್ನು ಉಂಟುಮಾಡುತ್ತಲೇ ಇದ್ದರು. ಆದರೆ ಹಝ್ರತ್ ಪೈಗಂಬರ್(ಸ) ಅವುಗಳನ್ನೆಲ್ಲ ಕಡೆಗಣಿಸುತ್ತಿದ್ದರು. ಮಕ್ಕಾದ ಖುರೈಶಿಗಳು ಆವೇಶಗೊಂಡು ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರ ಮೇಲೆ ಹಲ್ಲೆ ನಡೆಸಲು ನಿರ್ಧರಿಸಿದರು. ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಕೂಡ ಸಂಚು ಹೂಡಿದರು. ಆದರೆ ಮುಸ್ಲಿಮರ ಜಾಗರೂಕತೆಯ ಕಾರಣದಿಂದ ಈ ಸಂಚು ವಿಫಲವಾಯಿತು. ಆದಾಗ್ಯೂ ಹಝ್ರತ್ ಪೈಗಂಬರ್(ಸ) ಅವರೆಲ್ಲರನ್ನು ಕ್ಷಮಿಸಿದರು ಮತ್ತು ಮೈತ್ರಿ ಸಂಧಾನ ಮಾಡುವ ಪ್ರಯತ್ನವನ್ನು ಮುಂದುವರಿಸಿದರು.

ಅಲ್ಲಾಮ ಬೈಹಖಿ ಉರ್‌ವರಿಂದ ಹೀಗೆ ವರದಿ ಮಾಡುತ್ತಾರೆ: ಅನಂತರ ಖುರೈಶಿಯರ ಕಡೆಗೆ ಕಳುಹಿಸಲು ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರನ್ನು ಕರೆದರು. ಆಗ ಅವರು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನನಗೆ ಖುರೈಶಿಯರೊಡನೆ ಇರುವ ಶತ್ರುತ್ವದ ಬಗ್ಗೆ ಅವರಿಗೆ ಗೊತ್ತಿದೆ. ಅವರು ನನ್ನನ್ನು ವಧಿಸುವರು ಎಂಬ ಶಂಕೆ ನನಗೆ ಇದೆ. ನನ್ನ ಸಂರಕ್ಷಣೆ ಮಾಡುವ ಯಾವನೇ ವ್ಯಕ್ತಿ ಬನೂ ಅದ್ದಿ ಗೋತ್ರದಲ್ಲಿಲ್ಲ. ಆದರೂ ಯಾ ರಸೂಲಲ್ಲಾಹ್, ನೀವು ಬಯಸುವುದಾದರೆ, ನಾನು ಹೋಗುತ್ತೇನೆ. ಯಾ ರಸೂಲಲ್ಲಾಹ್, ಮಕ್ಕದಲ್ಲಿ ನನಗಿಂತ ಹೆಚ್ಚಿನ ಗೌರವ ಇರುವ, ಸಂರಕ್ಷಣೆಯನ್ನು ಮಾಡಲು ಮಕ್ಕದಲ್ಲಿ ದೊಡ್ಡ ಕುಟುಂಬವಿರುವ, ನೀವು ಬಯಸುವ ಸಂದೇಶವನ್ನು ತಲಪಿಸುವ ವ್ಯಕ್ತಿಯ ಬಗ್ಗೆ ನಾನು ಹೇಳಲೇ?. ಆ ವ್ಯಕ್ತಿ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ಆಗಿರುವರು. ಹೀಗೆ ಹಝ್ರತ್ ಉಸ್ಮಾನ್(ರ) ರಾಯಭಾರಿಯಾಗಿ ಮಕ್ಕಾಗೆ ಹೋದರು. ಅವರು ಖುರೈಶಿಯರ ಜನಕೂಟದ ಮುಂದೆ ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ಇರಿಸಿದರು. ಆದರೆ ಮುಸ್ಲಿಮರು ಈ ವರ್ಷ ಮಕ್ಕಾಗೆ ಪ್ರವೇಶಿಸಬಾರದು ಎಂಬ ಹಠದಲ್ಲೇ ಖುರೈಶಿಯರು ಇದ್ದರು. ವೈಯಕ್ತಿಕವಾಗಿ ಬೈತುಲ್ಲಾಹ್‌ದ ತವಾಫ್ ಮಾಡುವ ಅನುಮತಿಯನ್ನು ಖುರೈಶಿಯರು ಹಝ್ರತ್ ಉಸ್ಮಾನ್(ರ)ರಿಗೆ ಕೊಟ್ಟರು. ಆದರೆ ಅದನ್ನು ನಿರಾಕರಿಸುತ್ತಾ ಅವರು ಹೀಗೆ ಹೇಳಿದರು: ರಸೂಲುಲ್ಲಾಹ್(ಸ)ರನ್ನು ಮಕ್ಕಾದ ಹೊರಗೆ ತಡೆದು ನಿಲ್ಲಿಸಿ ನನಗೆ ತವಾಫ್ ಮಾಡಲು ಸಾಧ್ಯವಲ್ಲ. ಆದರೆ ಖುರೈಶಿಯರು ಯಾವ ವಿಧದಲ್ಲೂ ಒಪ್ಪಲಿಲ್ಲ. ಕೊನೆಗೆ ಹಝ್ರತ್ ಉಸ್ಮಾನ್(ರ) ಬೇಸರಗೊಂಡು ಮರಳಿ ಹೋಗಲು ತಯಾರಿ ಮಾಡಿದರು.

ಈ ಸಂದರ್ಭದಲ್ಲಿ, ಒಪ್ಪಂದದಲ್ಲಿ ಹೆಚ್ಚಿನ ಪ್ರಯೋಜನಕಾರಿ ಶರತ್ತುಗಳನ್ನು ಪಡೆಯಲಿಕಾಗಿ ಹಝ್ರತ್ ಉಸ್ಮಾನ್(ರ) ಮತ್ತು ಅವರ ಸಂಗಡಿಗರನ್ನು ಮಕ್ಕಾದಲ್ಲೇ ತಡೆದು ನಿಲ್ಲಿಸುವ ಕುತಂತ್ರವನ್ನು ಮಕ್ಕಾದ ಕುತಂತ್ರಿಗಳು ಮಾಡಿದರು. ಮಕ್ಕಾದವರು ಹಝ್ರತ್ ಉಸ್ಮಾನ್(ರ)ರನ್ನು ವಧಿಸಿದರು ಎಂಬ ವದಂತಿ ಮುಸ್ಲಿಮರ ನಡುವೆ ಹರಡಿತು. ಈ ಸುದ್ದಿ ಮುಟ್ಟಿದಾಗ ಹಝ್ರತ್ ಪೈಗಂಬರ್(ಸ)ರಿಗೆ ತೀವ್ರ ಕೋಪ ಮತ್ತು ದುಃಖವಾಯಿತು. ಹಝ್ರತ್ ಪೈಗಂಬರ್(ಸ) ಕೂಡಲೇ ಎಲ್ಲ ಮುಸ್ಲಿಮರನ್ನು ಒಂದು ಬಬೂಲ್ ಮರದ ಕೆಳಗೆ ಒಟ್ಟುಗೂಡಿಸಿದರು. ಅನಂತರ ಹೀಗೆ ಹೇಳಿದರು: ಈ ಸುದ್ದಿ ಸರಿಯೆಂದಾದರೆ, ಅಲ್ಲಾಹನಾಣೆ, ಉಸ್ಮಾನ್‌ರ ಪ್ರತೀಕಾರ ಪಡೆಯುವ ತನಕ ನಾವು ಇಲ್ಲಿಂದ ಹೋಗುವುದಿಲ್ಲ. ಅನಂತರ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಬನ್ನಿರಿ ಮತ್ತು ನನ್ನ ಕೈಯಲ್ಲಿ ಕೈಯಿಟ್ಟು (ಇಸ್ಲಾಮಿನಲ್ಲಿ ಬೈಅತ್ ಮಾಡುವ ರೀತಿಯಂತೆ) ನಿಮ್ಮಲ್ಲಿ ಯಾವನೇ ವ್ಯಕ್ತಿ ಬೆನ್ನು ತಿರುಗಿಸಲಾರ ಮತ್ತು ಜೀವತ್ಯಾಗ ಮಾಡಬೇಕಾಗಿ ಬಂದರೂ ತಮ್ಮ ಜಾಗವನ್ನು ಬಿಟ್ಟು ಹೋಗಲಾರ ಎಂದು ಪ್ರತಿಜ್ಞೆ ಮಾಡಿರಿ. ಬೈಅತ್ ನಡೆಯುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ತನ್ನ ಎಡಗೈಯನ್ನು ಬಲಗೈಯ ಮೇಲಿಟ್ಟು ಹೀಗೆ ಹೇಳಿದರು: ಇದು ಉಸ್ಮಾನ್‌ರ ಕೈಯಾಗಿದೆ. ಏಕೆಂದರೆ ಅವರು ಇಲ್ಲಿ ಇರುತ್ತಿದ್ದರೆ ಈ ಪರಿಶುದ್ಧ ವ್ಯಾಪಾರದಲ್ಲಿ ಅವರು ಯಾರಿಗಿಂತಲೂ ಹಿಂದೆ ಇರುತ್ತಿರಲಿಲ್ಲ. ಇಸ್ಲಾಮಿನ ಚರಿತ್ರೆಯಲ್ಲಿ ಇದು **ಬೈಅತೇ ರಿಝ್ವಾನ್** ಎಂಬ ಹೆಸರಲ್ಲಿ ಪ್ರಸಿದ್ಧವಾಗಿದೆ. ಮುಸ್ಲಿಮರು ಅಲ್ಲಾಹನ ಪರಿಪೂರ್ಣ ಸಂಪ್ರೀತಿಯ ಬಹುಮಾನವನ್ನು ಗಳಿಸಿದ ಬೈಅತ್ ಎಂದಾಗಿದೆ ಇದರ ಅರ್ಥ. ಪವಿತ್ರ ಖುರ್‌ಆನ್ ಕೂಡ ಈ ಬೈಅತ್ತಿನ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದೆ. ಈ ಬೈಅತ್ ಅತ್ಯಂತ ಮಹತ್ತಾದ

ವಿಜಯವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ಅದು ಮುಂದಿನ ವಿಜಯಗಳ ಬಾಗಿಲುಗಳನ್ನು ತೆರೆಯಿತು ಎಂದು ಮಾತ್ರವಲ್ಲ, ಮುಹಮ್ಮದೀ ದೀನಿನ ಕೇಂದ್ರಬಿಂಧು ಎಂದು ಹೇಳಬಹುದಾದ ಜೀವತ್ಯಾಗ ಮಾಡಲು ತಯಾರಾದಂತಹ ಇಸ್ಲಾಮಿನ ಸ್ಫೂರ್ತಿಯು ಅತ್ಯಂತ ವೈಭವಶಾಲಿ ರೀತಿಯಲ್ಲಿ ಇದರಿಂದ ಪ್ರಕಟಣೆಗೊಂಡಿತು. (ಹುಝೂರ್ ಹೇಳಿದರು:) ಹುದೈಬಿಯ ಸಂಧಿಯ ಇನ್ನಷ್ಟು ವಿವರಣೆ ಮುಂದಿನ ಬಾರಿ ವಿವರಿಸಲಾಗುವುದು.

(ಕೊನೆಗೆ ಲೋಕದ ಇಂದಿನ ಸ್ಥಿತಿಗತಿಗಳನ್ನು ಮುಂದಿರಿಸಿಕೊಂಡು ದುಆಗಳನ್ನು ಮಾಡಲು ಮನವಿ ಮಾಡುತ್ತಾ ಹುಝೂರ್ ಹೀಗೆ ಹೇಳಿದರು:) ಈಗ ನಾನು ಹೇಳಲು ಬಯಸುವುದೇನೆಂದರೆ, ಎಲ್ಲರಿಗೂ ಗೊತ್ತಿರುವಂತೆ ಯುರೋಪಿನಲ್ಲೂ ಸ್ಥಿತಿಗತಿಗಳು ಬಹಳ ತೀವ್ರಗತಿಯಲ್ಲಿ ಯುದ್ಧದ ಕಡೆಗೆ ಸಾಗುತ್ತಿವೆ. ಯುಕ್ರೇನ್ ಮತ್ತು ರಷ್ಯದ ಯುದ್ಧ ಹರಡಬಹುದಾದ ಸಾಧ್ಯತೆ ವರ್ಧಿಸುತ್ತಾ ಇದೆ. ಯುರೋಪಿನ ಇತರ ದೇಶಗಳಿಗೂ ಬೆದರಿಕೆಗಳು ಬರುತ್ತಿವೆ. ಹೆಚ್ಚಿನ ಬುದ್ಧಿವಂತರು ಮತ್ತು ಶಾಂತಿಪ್ರಿಯ ಜನರು ಹಾಗೂ ನಾಯಕರು ಈ ಕುರಿತು ಚಿಂತಿತರೂ ಆಗಿದ್ದಾರೆ. ಏನೇ ಇದ್ದರೂ ದುಆ ಮಾಡಿರಿ. ಅಲ್ಲಾಹನು ಅಹ್ಮದಿಯರನ್ನು ಮತ್ತು ಶಾಂತಿಪ್ರಿಯ ಜನರನ್ನು ಯುದ್ಧದ ದುಷ್ಪರಿಣಾಮಗಳಿಂದ ರಕ್ಷಿಸಲಿ. ಮುಂದಿನ ಪೀಳಿಗೆಗೆ ದೋಷ ಉಂಟಾಗುವಂತಹ ಆಯುಧಗಳನ್ನು ಈ ಜನರು ಯುದ್ಧದಲ್ಲಿ ಬಳಸದೇ ಇರುವಂತಾಗಲಿ.

ಮುಸ್ಲಿಮ್ ದೇಶಗಳಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರಿಗೂ ಬುದ್ಧಿ ಮತ್ತು ವಿವೇಕ ನೀಡಲಿ. ಅಲ್ಲಾಹನು ಅವರಿಗೆ ಸತ್ಯವನ್ನು ಅರಿಯಲು ಸೌಭಾಗ್ಯ ನೀಡಲಿ. ಮತ್ತೊಂದು ಸಂಗತಿಯ ಬಗ್ಗೆಯೂ ಗಮನಸೆಳೆಯಲು ಬಯಸುತ್ತೇನೆ. ಸ್ಥಿತಿಗತಿಗಳು ವೇಗವಾಗಿ ಕೆಟ್ಟು ಹೋಗುತ್ತಿರುವ ಕಾರಣದಿಂದ ಮೊದಲಿನಿಂದಲೇ ಜನರಿಗೆ ಇದರ ಬಗ್ಗೆ ಗಮನವಿದೆ. ಆದರೂ ಪುನಃ ನೆನಪಿಸಿಕೊಡುತ್ತೇನೆ. ಮನೆಗಳಲ್ಲಿ ಎರಡು ಮೂರು ತಿಂಗಳ ರೇಶನ್ ಇರಿಸಲು ಪ್ರಯತ್ನಿಸಿರಿ. ಆದರೆ ಅತ್ಯಂತ ಮುಖ್ಯವಾದ ಅಂಶವೇನೆಂದರೆ, ಅಲ್ಲಾಹನ ಸಾಮೀಪ್ಯವನ್ನು ಗಳಿಸಲು ಪ್ರಯತ್ನಿಸಿರಿ. ಅವನ ಸಂಪ್ರೀತಿಯನ್ನು ಗಳಿಸಲು ಪ್ರಯತ್ನಿಸಿರಿ. ಅವನೊಂದಿಗೆ ಸಂಬಂಧವನ್ನು ಸ್ಥಾಪಿಸಲು ಪ್ರಯತ್ನಿಸಿರಿ. ಅದನ್ನು ವೃದ್ಧಿಗೊಳಿಸಲು ಪ್ರಯತ್ನಿಸಿರಿ. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ. (ಆಮೀನ್)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَاءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(*atba*)
At, ***'Masjid Mubarak',*** *Islamabad, Tilford,* U.K. On 22-11-2024
**Summarized by** *Majlis Ansarullah Bharat*
***Kannada Translation***: Moulavi Inamullah for Kannada Desk, Qadian
***Reviewed by***: M.P Ibrahim | ***Layout***: Basheer K.P. Manjeshwar
***Published By***: Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon